# ನವಿಲುಗನ್ನಡಿ

‣ ಸುಂದರ ಮುಖಪುಟ, ಕುತೂಹಲಭರಿತ ಕತೆಗಳು, ಸಂದರ್ಶನಗಳಿಂದ ಜೂನ್ ಸಂಚಿಕೆ ಗಮನ ಸೆಳೆಯಿತು. 'ಸರಸ್ವತಿ ಸಮ್ಮಾನ' ಪುರಸ್ಕೃತ ಮರಾಠಿ ಲೇಖಕ ಶರಣಕುಮಾರ ಲಿಂಬಾಳೆ ಅವರೊಂದಿಗೆ ಚಂದ್ರಕಾಂತ ಪೋಕಳೆ ಅವರು ನಡೆಸಿದ ಸಂದರ್ಶನ ('ನಾನು ಕೇವಲ ದಲಿತ ಲೇಖಕನಲ್ಲ, ಭಾರತೀಯ ಬರಹಗಾರ') ವಿಶಿಷ್ಟವಾಗಿದೆ.

**ಬಿ.ಆರ್. ಅಣ್ಣಾಸಾಗರ, ಸೇಡಂ**
**ಎಂ.ಜಿ. ರಂಗಸ್ವಾಮಿ, ಹಿರಿಯೂರು**

‣ ನಿಘಂಟು ತಜ್ಞ ಜಿ. ವೆಂಕಟಸುಬ್ಬಯ್ಯ ಕುರಿತ ಬರಹ 'ಶಬ್ದ ಸಾಗರದಲ್ಲಿ ಸಿಕ್ಕ ಒಂದು ಬೊಗಸೆ ನೀರು' (ಎನ್.ಎಸ್. ಶ್ರೀಧರ ಮೂರ್ತಿ) ಆಪ್ತವಾಗಿದೆ. ಇದು ಅಸಾಮಾನ್ಯ ವ್ಯಕ್ತಿಗೆ ಅರ್ಥಪೂರ್ಣ ಶ್ರದ್ಧಾಂಜಲಿ ಬರಹವಾಗಿದೆ. ರಾಜಕಾರಣಿ ಬಿ. ಬಸವಲಿಂಗಪ್ಪನವರ ಭಾಷಣದಿಂದ ಸಾಹಿತ್ಯ ಮತ್ತು ರಾಜಕೀಯ ರಂಗದಲ್ಲಿ ಏನೆಲ್ಲ ಪಲ್ಲಟ ಆಯಿತು ಎನ್ನುವುದನ್ನು ರಹಮತ್ ತರೀಕೆರೆಯವರ 'ಬೂಸಾ ಪ್ರಕರಣ: ಚಳವಳಿಗಳ ತಾಯಿ' ಲೇಖನ ಉತ್ತಮವಾಗಿ ಚಿತ್ರಿಸುತ್ತದೆ.

**ನಾಗಭೂಷಣ ಎಚ್.ಬಿ., ಚಳ್ಳಕೆರೆ**
**ಸುಬ್ಬಲಕ್ಷ್ಮಿ ಎಚ್.ಕೆ., ಕೋಲಾರ**
**ಬಸು ಕುಂಬಾರ, ಬಾಗಲಕೋಟೆ**

‣ 'ಬೂಸಾ ಪ್ರಕರಣ: ಚಳವಳಿಗಳ ತಾಯಿ' ಲೇಖನ ಚಿಂತನಶೀಲ ಹಾಗೂ ಸತ್ವಪೂರ್ಣವಾಗಿದೆ.

**ಕೆ.ಪಿ. ರಾಮಗುಂಡಿ, ಬೈಲಹೊಂಗಲ**
**ಹುರುಕಡ್ಲಿ ಶಿವಕುಮಾರ, ಬಾಚಿಗೊಂಡನಹಳ್ಳಿ**

‣ 'ಲಾಕ್‌ಡೌನ್' (ಅವಿರತ ಮಾವಿನಕುಳಿ) ಕತೆ ಮಾರ್ಮಿಕವಾಗಿದೆ. ಒಂಟಿತನ, ನೆನಪು,




ಜೊತೆಗೆ ಹಲ್ಲಿಯನ್ನು ಕಂಡರೆ ಆಗುವ ಭಯ ಹಾಗೂ ಭಾವಗಳ ವರ್ಣನೆಯನ್ನು ಸೂಕ್ಷ್ಮವಾಗಿ ಚಿತ್ರಿಸಲಾಗಿದೆ. ಕತೆ ಹಾಗೂ ಸಂಚಿಕೆಯ ಇತರ ಬರಹಗಳು ಇಷ್ಟವಾದವು.

**ಸುಕನ್ಯಾ ಮೂರ್ತಿ, ಮೈಸೂರು**

‣ ಟಿ.ಎಂ. ಶೇಷಗಿರಿ ತುಮರಿಯವರ 'ಪರಿಹಾರ' ಕತೆ ವಾಸ್ತವಕ್ಕೆ ಹತ್ತಿರವಿದೆ.

**ಗಣಪತಿ ಶಿರಳಗಿ, ಸಾಗರ**

‣ 'ಪರಿಹಾರ' ಕತೆಯಲ್ಲಿ ಬರುವ ಪಾತ್ರಗಳೆಲ್ಲವೂ ಗಟ್ಟಿತನದಿಂದ ಕೂಡಿದ್ದು, ಕತೆಯ ಓಘಕ್ಕೆ ಪೂರಕವಾಗಿವೆ. ಲಂಚ ನಮ್ಮ ವ್ಯವಸ್ಥೆಯಲ್ಲಿ ಬೇರೂರಿರುವುದನ್ನು, ಮಧ್ಯವರ್ತಿಗಳ ಹಾವಳಿಯಿಂದ ಅರ್ಹ ಫಲಾನುಭವಿಗಳು ಹೇಗೆ ವಂಚಿತರಾಗುತ್ತಾರೆ ಎಂಬುದನ್ನು ಕತೆ ನೈಜವಾಗಿ ಚಿತ್ರಿಸುತ್ತದೆ.

**ಮಂಜುನಾಥ ಭಟ್, ಬೆಂಗಳೂರು**

‣ ರೇಶ್ಮಾ ಭಟ್ ಅವರು 'ಮಶಕವೆಂಬ ಮಾಯೆ ಕಚ್ಚಿ ಕೂಗದೇ ನರರಂ?' ಪ್ರಬಂಧದಲ್ಲಿ ಎಲ್ಲ ಮನೆಗಳಲ್ಲೂ ಸೊಳ್ಳೆಗಳ ನಾಶಕ್ಕಾಗಿ ನಡೆಯುವ ಪರದಾಟವನ್ನು ಸೊಗಸಾಗಿ ಚಿತ್ರಿಸಿದ್ದಾರೆ.

**ಸಾವಿತ್ರಿ ಶ್ಯಾನಭಾಗ್, ಕುಂದಾಪುರ**